# ಮಹಿಳಾ ವಿಶೇಷ

ಕನ್ನಡ ಮಹಿಳಾ ಸುದ್ದಿಯ ಏಕೈಕ ವಾರ ಪತ್ರಿಕೆ (ಪ್ರತಿ ಮಂಗಳವಾರ) ಮೈಸೂರು

ಸಂಪುಟ 1 ಸಂಚಿಕೆ 35 Volume 1 Issue 35
Email: mahilavishesha@yahoo.com
web:www.mahilavishesha.in

ಹೆಚ್.ವಿ. ವೆಂಕಟಸುಬ್ಬರಾವ್
ಸಂಪಾದಕರು
Mobile : 8880334444 / 9379777793

ಮಂಗಳವಾರ 26-04-2016
MAHILA VISHESHA

ಮೈಸೂರು
ಪುಟ 2
ಬೆಲೆ ₹ 2










## ನಾಮಪತ್ರ ಸಲ್ಲಿಕೆ




ವಿಧಾನ ಸಭೆ ಚುನಾವಣೆ ಗೆ ತಮಿಳು ನಾಡು ಮುಖ್ಯಮಂತ್ರಿ ಜಯ ಲಲಿತ ಅವರು ಸೋಮ ವಾರ ಆರ್. ಕೆ. ನಗರದ ವಿಧಾನ ಸಭಾ ಕ್ಷೇತ್ರದಿಂದ ನಾಮಪತ್ರವನ್ನು ಸಲ್ಲಿಸಿದರು. ಆ ಸಂದರ್ಭದಲ್ಲಿ ಸಾವಿರಾರು ಪಕ್ಷದ ಕಾರ್ಯಕರ್ತರು, ಸಾಮಾನ್ಯ ಜನರು ಶುಭವನ್ನು ಹಾರೈಸಿದರು.

ಚುನಾವಣೆಯು ಮೇ2016ರಂದು ನಡೆಯಲಿದ್ದು ಸುಮಾರು ಐದುವರೆ ಕೋಟಿ ಮತದಾರರು ಮತವನ್ನು ಚಲಾಯಿಸಲಿದ್ದಾರೆ. ಹಲವಾರು ಜನಪರ ಕೆಲಸ ಕಾರ್ಯಗಳನ್ನು ಮುಖ್ಯ ಮಂತ್ರಿ ಜಯಲಲಿತಾರವರು ಜಾರಿಗೊಳಿಸಿದ್ದು ಮತ ದಾರರು ಅವರನ್ನು ಪುನರ್ ಆಯ್ಕೆಗೊಳಿಸಲು ಬಯಸಿದ್ದಾರೆಂದು ಸ್ಥಳೀಯ ನಾಗರೀಕರ ಅಭಿಪ್ರಾಯವಾಗಿದೆ.

**ಇದು ನಿಮ್ಮ ಮಹಿಳಾ ಪತ್ರಿಕೆ**
**ಪ್ರೋತ್ಸಾಹಿಸಿ, ಬೆಳೆಸಿ**

## ಸ್ತ್ರೀಪರ ಸಂಘಟನೆಗಳಿಗೆ ಕೈ ಜೋಡಿಸಿ

ಮಹಿಳಾ ಪರವಾಗಿ ಹೋರಾಡುತ್ತಿರುವ ಸಂಘ ಸಂಸ್ಥೆಗಳಿಗೆ ಕೈ ಜೋಡಿಸಿದರೆ ಮಹಿಳಾ ದೌರ್ಜನ್ಯ ಮುಕ್ತ ಸಮಾಜ ನಿರ್ಮಾಣ ಸಾಧ್ಯ ಎಂದು ಜನವಾದಿಸಂಘಟನೆ ಅಧ್ಯಕ್ಷೆ ಕೆ. ಎಸ್. ವಿಮಲಾ ಆಶಯ ವ್ಯಕ್ತಪಡಿಸಿದರು.

ರಾಜ್ಯ ಮಹಿಳಾ ಆಯೋಗ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮೈಸೂರು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ಹಾಗೂ ಮೈಸೂರು ವಿವಿ ಸಹಯೋಗದಲ್ಲಿ ಮಾನಸ ಗಂಗೋತ್ರಿಯ ಸನೆಟ್ ಭವನದಲ್ಲಿ ಆಯೋಜಿಸಿದ್ದ ಎರಡು ದಿನಗಳ ಮಾನವ ಹಕ್ಕುಗಳ ನೆಲೆಯಲ್ಲಿ ಮಹಿಳೆ ಮತ್ತು ಮಹಿಳಾ ಕಾನೂನುಗಳು ವಿಷಯ ಕುರಿತು ವಿಭಾಗೀಯ ಮಟ್ಟದ ಕಾರ್ಯಾಗಾರದಲ್ಲಿ ಮಹಿಳಾ ಕಾನೂನುಗಳ ಜಾರಿಯಲ್ಲಿ ಸಂಘ ಸಂಸ್ಥೆಗಳಪಾತ್ರ ವಿಷಯ ಕುರಿತು ವಿಷಯ ಮಂಡಿಸಿದರು.

## ಮಹಿಳೆಯರಿಗೆ ಭದ್ರತೆ

ಗಾರ್ಮೆಂಟ್ ಎಂದ ಕೂಡಲೇ ಎಲ್ಲ ಸಿದ್ಧ ಉಡುಪು ಕಾರ್ಖಾನೆಗಳನ್ನು ಒಂದೇ ಸಾಲಿನಲ್ಲಿ ನೋಡುವುದು ಸರಿಯಲ್ಲ. ನಮ್ಮ ಕಾರ್ಖಾನೆಯಲ್ಲೂ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದು ಅವರಿಗೆ ಸಾರಿಗೆ ವ್ಯವಸ್ಥೆಯಿಂದ ಹಿಡಿದು ಎಲ್ಲ ಸೌಕರ್ಯಗಳನ್ನು ಅವರಿಗೆ ಒದಗಿಸಿದ್ದೇವೆ. ತಿಂಗಳಿಗೆ ಎರಡು ಬಾರಿ ಸಭೆ ನಡೆಸಿ ಕಾರ್ಮಿಕರ ಕುಂದು ಕೊರತೆಗಳನ್ನು ಆಲಿಸಿ ಸಮಸ್ಯೆಗಳಿದ್ದರೆ ಪರಿಹಾರ ಒದಗಿಸಲಾಗುತ್ತಿದೆ.

ಬೈಯ್ಯದೆ, ಕಿರುಚಾಡದೆ ಕೆಲಸ ತೆಗೆಯುವಂತೆ ಎಲ್ಲ ಮೇಲ್ವಿಚಾರಕರಿಗೂ ತಿಳಿಸಿದ್ದೇವೆ. ಅದರಂತೆ ಕೆಲಸ ಮುಂದುವರೆಯುತ್ತಿದೆ. ಮಹಿಳೆಯರ ಜೊತೆ ಅಸಭ್ಯವಾಗಿ ವರ್ತಿಸಿದ್ದು ಕಂಡು ಬಂದರೆ ಅಂತಹ ನೌಕರರ ವಿರುದ್ಧ ತಕ್ಷಣವೇ ಕ್ರಮ ಕೈಗೊಳ್ಳುತ್ತೇವೆ. ಕಾರ್ಮಿಕ ಇಲಾಖೆಯ ಕಾನೂನಿನಂತೆಯೇ ರಜೆ ಮತ್ತಿತರ ಸೌಲಭ್ಯಗಳನ್ನು ನೀಡಲಾಗುತ್ತಿದೆ ಎಂದು ಗೋಕುಲ್ ದಾಸ್ ಗಾರ್ಮೆಂಟ್ಸ್‌ನ ಪ್ರಧಾನ ವ್ಯವಸ್ಥಾಪಕರು ತಿಳಿಸಿದ್ದಾರೆ.

**ನಾಗರೀಕರು ಕಸಮುಕ್ತ ನಗರವನ್ನಾಗಿ ಮಾಡಲು**
**ಮೈಸೂರು ಮಹಾನಗರ ಪಾಲಿಕೆಗೆ ಸಹಕರಿಸಿ**
**ಪ್ಲಾಸ್ಟಿಕ್ ಬಳಕೆ ನಿಲ್ಲಿಸಿ ನೀರನ್ನು ಮಿತವಾಗಿ ಬಳಸಿ**

## ಜೂನ್ 27ಕ್ಕೆ ವಿವಾಹ

ರಾಜವಂಶಸ್ಥ ಯದುವೀರ ಹಾಗೂ ತ್ರಿಷಿಕಾ ಕುಮಾರಿ ಸಿಂಗ್ ರವರ ಲಗ್ನಪತ್ರಿಕೆ ಶಾಸ್ತ್ರ ಅಂಬಾವಿಲಾಸ್ ಅರಮನೆಯ ಚಾಮುಂಡಿ ತೊಟ್ಟಿಯಲ್ಲಿ ಸೋಮವಾರ ಬೆಳಗ್ಗೆ ಮಿಥುನ ಲಗ್ನದಲ್ಲಿ ನೆರವೇರಿತು. ವಿವಾಹವು ಅಂಬಾವಿಲಾಸ ಅರಮನೆಯಲ್ಲಿ ಜೂನ್ 27 ರಂದು ನಡೆಯಲಿದೆ. ಲಗ್ನಪತ್ರಿಕೆ ಶುಭ ಕಾರ್ಯಕ್ರಮದಲ್ಲಿ ಅರಮನೆಯ ರಾಜ ಪುರೋಹಿತರು, ಜೋಯಿಸರು, ಎರಡೂ ಕಡೆಯ ಕುಟುಂಬ ವರ್ಗದವರು ಹಾಜರಿದ್ದರು.

## ಪ್ಲಾಸ್ಟಿಕ್ ಮುಕ್ತ ಕಚೇರಿ ಸಂಕಲ್ಪಕ್ಕೆ ಚಾಲನೆ:



ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಸ್ವಚ್ಛ ಭಾರತ ಅಭಿಯಾನ ಯೋಜನೆ ಯನ್ನು ಪರಿಣಾಮಕಾರಿ ಯಾಗಿ ಅನುಷ್ಠಾನಗೊಳಿಸಲು ಮುಂದಾಗಿರುವ ಮೈಸೂರು ಜಿಲ್ಲಾ ಡಳಿತವು ಸರ್ಕಾರಿ ಕಚೇರಿಗಳನ್ನು ಪ್ಲಾಸ್ಟಿಕ್ ಮುಕ್ತಗೊಳಿಸುವ ಕಾರ್ಯಕ್ಕೆ ಮುಂದಾಗಿದೆ.

ಜಿಲ್ಲಾಧಿಕಾರಿ ಸಿ. ಶಿಖಾರವರು ತಮ್ಮ ಕಚೇರಿಯಲ್ಲಿ ಇದು ನಮ್ಮ ಕಚೇರಿ, ನಾವು ಪ್ಲಾಸ್ಟಿಕ್ ಬಳಸುವುದಿಲ್ಲ, ನೀವೂ ಬಳಸಬೇಡಿ ದಯವಿಟ್ಟು ಪ್ಲಾಸ್ಟಿಕ್ ತ್ಯಜಿಸಿ, ನೀವೇ ನಿಮ್ಮ ಬಟ್ಟೆ ಕಾಗದದ ಚೀಲ ತನ್ನಿರಿ. ನಮ್ಮ ಮೈಸೂರು ನಂ. 1 ಸ್ವಚ್ಛ ನಗರ ಎಂಬ ಘೋಷಣೆ ಇರುವ ಪೋಸ್ಟರನ್ನು ಅಂಟಿಸುವ ಮೂಲಕ ಪ್ಲಾಸ್ಟಿಕ್ ಮುಕ್ತ ಸರ್ಕಾರಿ ಕಚೇರಿ ಸಂಕಲ್ಪಕ್ಕೆ ಇತ್ತೀಚೆಗೆ ಚಾಲನೆ ನೀಡಿದರು.

## ಪರೀಕ್ಷೆ ಮುಂದಕ್ಕೆ

ಕೇಂದ್ರ ಲೋಕ ಸೇವಾ ಆಯೋಗವು 2016ರ ನಾಗರೀಕ ಸೇವೆಗಳ ಪೂರ್ವಭಾವಿ ಪರೀಕ್ಷೆಯನ್ನು ಮುಂದಕ್ಕೆ ಹಾಕಿದೆ. ಐ.ಎ.ಎಸ್., ಐಪಿಎಸ್ ಹಾಗೂ ಐಎಫ್‌ಎಸ್ ಪೂರ್ವಭಾವಿ ಪರೀಕ್ಷೆಗಳ ದಿನಾಂಕವನ್ನು ಶೀಘ್ರದಲ್ಲೇ ಅಧಿಸೂಚನೆ ಹೊರಡಿಸಲಾಗುವುದೆಂದು ಯುಪಿಎಸ್ಸಿ ಪ್ರಕಟಣೆ ಯಲ್ಲಿ ತಿಳಿಸಿದೆ.

# ರೋಹಿಣಿ ಭಟ್‌ಗೆ ಬದುಕು ಕೊಟ್ಟ ಹಪ್ಪಳ

ಹಪ್ಪಳಕ್ಕೆ ಯಾವಾಗಲೂ ಬೇಡಿಕೆ ಇದೆ. ಶುಭ ಸಮಾರಂಭ, ಹಬ್ಬ ಹರಿದಿನಗಳಲ್ಲಿ ಊಟದೊಂದಿಗೆ ಹಪ್ಪಳಕ್ಕೆ ಸ್ಥಾನ ಇದ್ದೇ ಇರುತ್ತದೆ. ಈ ಹಪ್ಪಳ ವ್ಯಾಪಾರದಿಂದ ಬದುಕನ್ನು ಕಟ್ಟಿಕೊಳ್ಳಬಹುದು. ಶ್ರಮಕ್ಕೆ ತಕ್ಕ ಬೆಲೆಯೂ ಇದೆ. ಮನೆಯಲ್ಲೇ ಇರುವ ಮಹಿಳೆಯ.ರು ಹಬ್ಬಳ ಮಾಡಿ, ಮಾರಿ ಜೀವನ ಸಾಗಿಸಬಹುದು ಎಂಬುದಕ್ಕೆ ನಾನೇ ಉದಾಹರಣೆ' ಎನ್ನುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರು ತಾಲ್ಲೂಕು ಪೋಳ್ಯದಲ್ಲಿರುವ ಗೃಹಿಣಿ ರೋಹಿಣಿ ಭಟ್, ಅವರು ವೈವಿಧ್ಯಮಯ ಹಪ್ಪಳ ತಯಾರಿಸಿ ಮಾರಾಟ ಮಾಡುವುದರ ಮೂಲಕ ಜೀವನ ಬಂಡಿ ನಡೆಸುತ್ತಿದ್ದಾರೆ.

ಚಿಕ್ಕ ವಯಸ್ಸಿನಲ್ಲೇ ಗಂಡನನ್ನು ಕಳೆದುಕೊಂಡ ರೋಹಿಣಿ ಅವರು ತಮ್ಮ ಒಬ್ಬಳೇ ಮಗಳು ಲಕ್ಷ್ಮಿ ಅವರ ಮನೆಯಲ್ಲಿ ಆಶ್ರಯ ಪಡೆದರು. ದುರದೃಷ್ಟವಶಾತ್ ಮೊಮ್ಮಗ ಶಾಲಾ ಬಾಲಕನಿರುವಾಗ ಮಗಳೂ ವಾಹನ ಅಪಘಾತದಲ್ಲಿ ಗಂಡನನ್ನು ಕಳೆದುಕೊಂಡರು. ತಾಯಿ- ಮಗಳೂ ಇಬ್ಬರಿಗೂ ಮುಂದೆ ಜೀವನಕ್ಕೆ ಏನು? ಎಂಬ ಪ್ರಶ್ನೆ ಬೃಹದಾಕಾರವಾಗಿ ತಲೆಯೆತ್ತಿ ನಿಂತಿತು. ಇದ್ದ ಆಸ್ತಿ ಎಂದರೆ ಒಂದು ಪುಟ್ಟ ಮನೆ ಮಾತ್ರ. ಇಬ್ಬರೂ ಹೆಚ್ಚು ಶಾಲೆ ಕಲೆತವರಲ್ಲ. ಹೊರಗೆ ದುಡಿದು ಅಭ್ಯಾಸವೂ ಇರಲಿಲ್ಲ. ಆದರೆ ಹಪ್ಪಳ ತಯಾರಿಯಲ್ಲಿ ರೋಹಿಣಿ ಅವರದು ಎತ್ತಿದ ಕೈ ಆಗಿತ್ತು. ಗೋಧಿ, ರಾಗಿ, ಅಕ್ಕಿ, ಹಲಸು, ಬಟಾಟೆ, ಬಾಳೆಕಾಯಿ, ಕಣಿಲೆ, ದೀಗುಜ್ಜೆ, ಮರಗೆಣಸು ಹೀಗೆ ವಿವಿಧ ತರಕಾರಿ ಹಾಗೂ



ಧಾನ್ಯಗಳಿಂದ ಹಪ್ಪಳ ತಯಾರಿಸುತ್ತಿದ್ದರು ಮಾತ್ರವಲ್ಲ ಮನೆಗೆ ಬಂದ ರುಚಿ ಅರಸಿ ಪುನಃ ಅವರನ್ನು ಹುಡುಕಿಕೊಂಡು ಬರುತ್ತಿದ್ದರು. ಆಗ ಅವರಿಗೆ ಒಂದು ಯೋಚನೆ ಹೊಳೆಯಿತು. ಇದನ್ನೇ ವೃತ್ತಿಯನ್ನಾಗಿ ಮಾಡಿದರೆ ಹೇಗೆ? ಎಂದು. ಮಗಳಲ್ಲಿ ಹೇಳಿದರು. ಅವರೂ ತನ್ನ ಒಪ್ಪಿಗೆ ಸೂಚಿಸಿದರು. ಕೈಯಲ್ಲಿ ಹಣವಿರಲಿಲ್ಲ. ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಸಂಘದಿಂದ ಸಾಲ ತೆಗೆದರು. ಹಪ್ಪಳಕ್ಕೆ ಬೇಕಾದ ಸಾಮಾನುಗಳನ್ನು ಖರೀದಿಸಿ ಹಪ್ಪಳ ಮಾಡಲು ಪ್ರಾರಂಭಿಸಿಯೇ ಬಿಟ್ಟರು. ಇದೆಲ್ಲ ನಡೆದದ್ದು ಹತ್ತು ವರ್ಷಗಳ ಹಿಂದೆ.

ರೋಹಿಣಿ ಅವರ ಹಪ್ಪಳ ಕಾಯಕ ಬೆಳಗ್ಗೆ 3 ಗಂಟೆಗೆ ಆರಂಭವಾಗುತ್ತದೆ. ಮಧ್ಯಾಹ್ನ 12 ಗಂಟೆಯಷ್ಟು ಹೊತ್ತಿಗೆ ಎಲ್ಲ ಹಪ್ಪಳ ಅಂಗಳಕ್ಕೆ ಬಿದ್ದು ಹೋಗುತ್ತದೆ. ಮಗಳೂ ಹಾಗೂ ಸಂಬಂಧಿಕರು ಅವರೊಂದಿಗೆ ಕೈ ಜೋಡಿಸುತ್ತಾರೆ. ಮೊದಲೇ ಆರ್ಡರ್ ತೆಗೆದುಕೊಂಡು ಅದಕ್ಕೆ



ಅನುಗುಣವಾಗಿ ದಿನದಲ್ಲಿ 2000ದಿಂದ 2500ರವರೆಗೆ ಹಪ್ಪಳ ಮಾಡುತ್ತಾರೆ. 100 ಹಪ್ಪಳಕ್ಕೆ 150 ರೂಪಾಯಿಯಂತೆ ಮಾರುತ್ತಾರೆ. ಹಲಸಿನ ಕಾಯಿ ಹಪ್ಪಳ ತಯಾರಿಸಲು ಕೆಲಸ ಹೆಚ್ಚು ಇರುವುದರಿಂದ ಅದನ್ನು ಮಾತ್ರ 100ಕ್ಕೆ 400 ರೂಪಾಯಿಯಂತೆ ಮಾರುತ್ತಾರೆ. ಒಂದು ದಿನದ ಸಾಮಾನಿನ ಖರ್ಚು 2000ರೂ. ಲಾಭ 1500ರೂ. ಎಂದು ಲೆಕ್ಕ ಒಪ್ಪಿಸುತ್ತಾರೆ ರೋಹಿಣಿ.

ಬಂಟ್ವಾಳ, ಮಂಗಳೂರು, ಪುತ್ತೂರು ಇತ್ಯಾದಿ ಸುತ್ತಮುತ್ತಣ ಊರುಗಳಿಂದ ಜನರು ಮನೆಗೆ ಬಂದು ಹಪ್ಪಳ ಕೊಂಡು ಹೋಗುತ್ತಾರೆ. ಅದರಲ್ಲೂ ಅವರು ಮಾಡುವ ಬಟಾಟೆ ಹಪ್ಪಳಕ್ಕೆ ಎಲ್ಲಿಲ್ಲದ ಬೇಡಿಕೆ. ಗರಿಗರಿಯಾಗಿ ಗರಂ ಆಗಿರುವ ಹಪ್ಪಳ ಸಾಗರ ದಾಟಿ ಅಮೆರಿಕಕ್ಕೂ ಹೋಗಿದೆ.

ಮಾಡಿದ ಹಪ್ಪಳ ತಕ್ಷಣ ಖಾಲಿ ಆಗುತ್ತದೆ. ಬೇಡಿಕೆ ಇದ್ದಷ್ಟು ಪೂರೈಸಲು ಆಗುವುದಿಲ್ಲ. ಈ ಆದಾಯದಿಂದಲೇ ಈಗ ಮೊಮ್ಮಗ ಎಂಬಿಬಿಎಸ್ ಓದುತ್ತಿದ್ದಾನೆ. ನಾವು ಆರ್ಥಿಕವಾಗಿ ಮೇಲ ಬಂದಿದ್ದೇವೆ. ಮಳೆಗಾಲದಲ್ಲಿ ಹಪ್ಪಳ ಕೆಲಸಕ್ಕೆ ಬಿಡುವು. ಆ ಸಮಯದಲ್ಲಿ ಆರತಿ ಬತ್ತಿ, ಜನಿವಾರ



ವಯರ್ ಬ್ಯಾಗ್ ಮಾಡಿ ಮಾರುತ್ತೇವೆ. ಸುಮ್ಮನೆ ಕುಳಿತುಕೊಳ್ಳುವುದಿಲ್ಲ ಎಂದು ಆತ್ಮವಿಶ್ವಾಸದಿಂದ ನುಡಿಯುತ್ತಾರೆ ಅವರು. ವಯಸ್ಸು 68 ದಾಟಿದರೂ ಹಪ್ಪಳ ಮಾಡುವ ಅವರ ಉತ್ಸಾಹ ಇನ್ನೂ ಕುಗ್ಗಿಲ್ಲ..ಇಂದಿನ ಯುವ ಪೀಳಿಗೆಗೆ ಇವರೇ ಮಾದರಿ ಮಹಿಳೆ.

## ಪ್ಲಾಸ್ಟಿಕ್ ನಿಷೇಧ

ಪಂಚಾಯತ್ ರಾಜ್ ಎಂಜಿನಿಯರಿಂಗ್ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಕಚೇರಿ ಮತ್ತು ಮೈಸೂರು ಉಪವಿಭಾಗ ಕಛೇರಿಯಲ್ಲಿ ಪ್ಲಾಸ್ಟಿಕ್ ಕ್ಯಾರಿಬ್ಯಾಗ್‌ಗಳು ಹಾಗೂ ದೈನಂದಿನ ಬಳಕೆಯಲ್ಲಿರುವ ಇತರೆ ಪ್ಲಾಸ್ಟಿಕ್ ವಸ್ತುಗಳ ಬಳಕೆಯನ್ನು ನಿಷೇಧಿಸುವ ಬಗ್ಗೆ ಇತ್ತೀಚೆಗೆ ಇಲ್ಲಿನ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ ಪ್ರಮಾಣ ವಚನ ಸ್ವೀಕರಿಸಿದರು. ನಂತರ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಕಚೇರಿಯನ್ನು ಸ್ವಚ್ಛಗೊಳಿಸಿದರು. ಪ್ಲಾಸ್ಟಿಕ್ ವಸ್ತುಗಳ ಬಳಕೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಕೈಗೊಳ್ಳಲಾಯಿತು.

**ನುಡಿಮುತ್ತು**

ಜಗತ್ತು ಒಂದು ಏಣಿ ಇದ್ದಂತೆ. ಏಣಿ ಹಿಡಿದು ಕೆಲವರು ಮೇಲೇರುತ್ತಾರೆ. ಕೆಲವರು ಕೆಳಗಿಳಿಯುತ್ತಾರೆ.

ಇಟಾಲಿಯನ್ ಗಾದೆ

**ಕವನ**

ಕರುಣೆಯ ಕರುನಾಡು
ಶಿಲ್ಪಕಲೆಗೆ ಬೇಲೂರು ಹಳೇಬೀಡು
ನೋಡಲು ನೂರಾರು ಊರು
ಮನಸ್ಸಿಗೆ ಮೆಚ್ಚೋದು ಮೈಸೂರು'

**A ಟು Z ಜೀವನ**

U - ವಕಾರಾದ ನಾವು ಓದು ಮುಗಿಸಿ
V - ಧ ವಿಧ ಕೆಲಸಗಳ ಕನಸು ಹೊತ್ತು
W - ww ಅಂತ Computer ಮುಂದೆ ಕೂತು

...ಮುಂದುವರಿಯುವುದು

**ವಿವೇಕನಂದರ ವಾಣಿ**

ಮಾನವ ಸೇವೆಯೇ ದೇವರ ಸೇವೆ
ನಿಮ್ಮನ್ನು ನಿಂದಿಸುವ ಜನರನ್ನು
ಆಶೀರ್ವದಿಸಿ

## ದೃಶ್ಯಕ್ಕೂ ಹಿಂಸೆಗೂ ಇದೆ ನಂಟು !

ಒಬ್ಬೊಬ್ಬರಲ್ಲಿ ಒಂದೊಂದು ಮಾದರಿ ಸಿನಿಮಾಗಳನ್ನು ನೋಡುವ ಆಸಕ್ತಿ. ಕೆಲವರಿಗೆ ಹಾಸ್ಯ, ಕೆಲವರಿಗೆ ಗಂಭೀರ. ಇನ್ನು ಕೆಲವರಿಗೆ ಪ್ರೇಮಕಥೆಗಳ ಮೇಲೆ ಪ್ರೀತಿ. ಆಕ್ಷನ್ ಸಿನಿಮಾ, ಹಾರರ್ ಚಿತ್ರಗಳನ್ನು ನೋಡುವ ವರ್ಗವೂ ದೊಡ್ಡದು. ಅದೇ ರೀತಿ ಹಿಂಸೆಯನ್ನೇ ವೈಭವೀಕರಿಸುವ ಚಿತ್ರಗಳನ್ನು ಮೆಚ್ಚುವವರೂ ಇದ್ದಾರೆ. ಭಾರತೀಯ ಚಿತ್ರರಂಗದಲ್ಲಿ ಇಂತಹ ಹಿಂಸಾತ್ಮಕ ಚಿತ್ರಗಳಿಗೆ ಕೊರತೆಯಿಲ್ಲ. ಆದರೆ ಈ ಹಿಂಸಾತ್ಮಕ ಅಂಶಗಳಿರುವ ಚಿತ್ರವನ್ನು ಇಷ್ಟಪಡುವವರ ಮನಸ್ಸು ತಿಳಿಯಾಗಿರುವುದಿಲ್ಲ ಎನ್ನುತ್ತದೆ ಅಧ್ಯಯನ.

ಹಿಂಸೆಯ ಸನ್ನಿವೇಶಗಳಿರುವ ಚಿತ್ರಗಳನ್ನು ಮೆಚ್ಚುವವರು ಸುಳ್ಳು ಹೇಳುವ, ವಂಚಿಸುವ ಅಥವಾ ಕದಿಯುವ ಚಾಳಿ ಹೊಂದಿರುತ್ತಾರೆ. ಅಂತಹ ಚಿತ್ರಗಳಿಗೆ ಮತ್ತಷ್ಟು ಒಲವು ತೋರು ವವರಲ್ಲಿ ನೈತಿಕತೆ ಉಂಟಾಗುವ ಸಾಧ್ಯತೆ ಇದೆ ಎಂದೂ ಈ ಅಧ್ಯಯನ ಎಚ್ಚರಿಕೆ ನೀಡಿದೆ.

ದೃಶ್ಯ ಮಾಧ್ಯಮಗಳಲ್ಲಿ ತೋರಿಸುವ ಹಿಂಸೆ ನಮ್ಮಲ್ಲಿ ಆಕ್ರೋಶದ, ದುಡುಕಿನ ನಡತೆಯನ್ನು ಹೆಚ್ಚಿಸುತ್ತದೆ ಎಂಬುದು ಈ ಹಿಂದಿನ ಸಂಶೋಧನೆಗಳಿಂದ ಗೊತ್ತಾಗಿದೆ. ಆದರೆ, ನೂತನ ಸಂಶೋಧನೆಯು ಜನರು ಅದರಾಚೆಗೂ ಹೋಗುತ್ತಾರೆ ಎಂಬುದನ್ನು ಕಂಡುಕೊಂಡಿದೆ.

ಸುಮಾರು ೧ ಸಾವಿರ ಜನರನ್ನು ಈ ಅಧ್ಯಯನದಲ್ಲಿ ಮೂರು ಪ್ರಯೋಗಗಳಿಗೆ ಒಳಪಡಿಸಲಾಗಿದೆ. ಮೊದಲ ಪ್ರಯೋಗದಲ್ಲಿ ಸಿನಿಮಾ ವಿಮರ್ಶೆಯನ್ನು ನೀಡಿ ಅದನ್ನು ಸಂಪಾದನೆ ಮಾಡುವಂತೆ ಹೇಳಲಾಗಿತ್ತು. ಅರ್ಧದಷ್ಟು ಮಂದಿ ಹಿಂಸಾತ್ಮಕ ಭಾಷೆಗಳನ್ನು ಬಳಸಿದ್ದರು. ಮತ್ತೊಂದು ಪ್ರಯೋಗದಲ್ಲಿ ಚಿತ್ರದ ತುಣುಕುಗಳನ್ನು ಆಯ್ದುಕೊಳ್ಳುವ ಅವಕಾಶ ನೀಡಲಾಗಿತ್ತು. ಅದರಲ್ಲಿ ಹಿಂಸೆಯ ಸನ್ನಿವೇಶಗಳನ್ನು ಆಯ್ದುಕೊಂಡು ಪೂರ್ತಿಯಾಗಿ ನೋಡಲು ಬಯಸಿದವರ ಸಂಖ್ಯೆ ಅಧಿಕವಾಗಿತ್ತು. ಈ ಅಧ್ಯಯನದಲ್ಲಿ ಮಹಿಳೆಯರು ಮತ್ತು ಪುರುಷರು ಸಮಾನವಾಗಿ ಪಾಲ್ಗೊಂಡಿದ್ದರು. ಆದರೆ ಹಿಂಸಾತ್ಮಕ ವಿಡಿಯೋಗಳು ಪುರುಷರ ಮೇಲೆಯೇ ಹೆಚ್ಚಿನ ಋಣಾತ್ಮಕ ಪ್ರಭಾವಪ ಬೀರುತ್ತವೆ ಎಂಬುದು ಇಲ್ಲಿ ದೃಢಪಟ್ಟಿದೆ. ಅವರಲ್ಲಿ ಸುಳ್ಳು ಹೇಳಬೇಕು, ಎನಿಸುವ, ವಂಚಿಸುವ ಮತ್ತು ಕದಿಯಬೇಕು ಎನ್ನುವ ಪ್ರಚೋದನೆಯನ್ನೂ ಇಂಥ ದೃಶ್ಯಗಳು ಉಂಟು ಮಾಡುತ್ತವೆ ಎನ್ನುತ್ತಾರೆ ಸಂಶೋಧಕರು.

**ಇದು ನಿಮ್ಮ ಮಹಿಳಾ ಪತ್ರಿಕೆ ಪ್ರೋತ್ಸಾಹಿಸಿ, ಬೆಳೆಸಿ**

## ಮೈಸೂರು ನಿವಾಸಿಗಳೇ ಚಿತ್ರಗಳನ್ನು ನೋಡಿ ಶಬಾಸ್ ಅಂದುಕೊಳ್ಳಿ



ಸೀತಾರಂಗ ಆಸ್ಪತ್ರೆ ಬಳಿ ಇರುವ ಸರ್ಕಲ್‌ನಿಂದ ಬಲ್ಲಾಳ್ ಕಡೆಗೆ ಬರುವ ರಸ್ತೆಯಲ್ಲಿ ಬಿದ್ದಿರುವ ಕಸ



ಅಗ್ರಹಾರ ಸರ್ಕಲ್ ಬಳಿ ಬಿಸಿಲನ್ನು ಲೆಕ್ಕಿಸದೆ ನಗರ ಪಾಲಿಕೆಯ ಸಿಬ್ಬಂದಿ ಕಸವನ್ನು ತೆಗೆಯುತ್ತಿರುವುದು.



ಸರಸ್ವತಿಪುರಂ ಚೆಕ್ ಪಾಯಿಂಟ್ ಹತ್ತಿರ ಬಿದ್ದಿರುವ ಕಸವನ್ನು ವಿಲೇವಾರಿ ಮಾಡುತ್ತಿರುವುದು

ಜನಸಾಮಾನ್ಯರು, ಜನಪ್ರತಿನಿಧಿಗಳು, ಮಹಾನಗರಪಾಲಿಕಾ ಅಧಿಕಾರಿಗಳು ಹಾಗು ಪೌರಕಾರ್ಮಿಕರು ಎಲ್ಲರೂ ಒಟ್ಟಾಗಿ ಸೇರಿ ಕಸ ವಿಲೇವಾರಿ ಕೆಲಸವನ್ನು ಮಾಡಿದರೆ ಮುಂದೆಯೂ ಮೈಸೂರುನಗರಕ್ಕೆ ನಂ. 1 ಸ್ಥಾನ, ನಾಗರೀಕರು ನಂ. 1 ಸ್ಥಾನವನ್ನು ಬೇರೆ ನಗರದವರಿಗೆ ಬಿಟ್ಟುಕೊಡುವುದಾದರೆ ಬಿಟ್ಟು ಕೊಡಿ; ಉಳಿಸಿಕೊಳ್ಳುವುದಾದರೆ ಉಳಿಸಿಕೊಳ್ಳಿ.

## ಅರ್ಜಿ ಆಹ್ವಾನ

ಕರ್ನಾಟಕ ರಾಜ್ಯ ಅರಣ್ಯ ಇಲಾಖೆಯಲ್ಲಿ ಉಪವಲಯ ಅಧಿಕಾರಿಗಳ ಹುದ್ದೆಗಳು ಖಾಲಿಯಿದ್ದು ಆ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 17-05-2016 ಹೆಚ್ಚಿನ ಮಾಹಿತಿಗಾಗಿ www. aranya.gov.in. ವೆಬ್‌ಸೈಟ್ ನೋಡ ಬಹುದಾಗಿದೆ.

## ಅರ್ಜಿ ಆಹ್ವಾನ

ಕೇಂದ್ರ ಗೃಹ ಸಚಿವಾಲಯದಡಿಯಲ್ಲಿ ಕಾರ್ಯ ನಿರ್ವಹಿಸುವ ಕೇಂದ್ರ ಕೈಗಾರಿಕಾ ಭದ್ರತಾ ಪಡೆಯಲ್ಲಿ ಖಾಲಿಯಿರುವ ಕಾನ್ಸ್‌ಟೇಬಲ್ ಹುದ್ದೆಗಳ ಭರ್ತಿಗೆ ನೇಮಕಾತಿಗಾಗಿ ಅರ್ಜಿಯನ್ನು ಆಹ್ವಾನಿಸಿದೆ. ಒಟ್ಟು 137 ಹುದ್ದೆಗಳು ಖಾಲಿ ಇದ್ದು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 09-05-2016

**ಓದುಗರೇ ಗಮನಿಸಿ**

ಇದು ನಿಮ್ಮ ಪತ್ರಿಕೆ ತನು ಮನ ಧನ ನೀಡಬಯಸುವ ಉದಾರ ಮನಸ್ಸಿನ ವ್ಯಕ್ತಿಗಳು / ಸಂಸ್ಥೆಗಳು ಸಂಪರ್ಕಿಸಿ.ಅಭಿವೃದ್ಧಿಗಾಗಿ ನೀಡಿರುವ ದಾನಿಗಳ ಹೆಸರನ್ನು ಪ್ರಕಟಿಸಲಾಗಿದೆ.

ಮೊ : 8880334444/ 9379777793

| | | |
|---|---|---|
| ಶ್ರೀಗೌರಿ | ತುಮಕೂರು | 1001/- |
| ಶೀತಲ್ | ತಿಪಟೂರು | 1001/- |
| ರಕ್ಷಿತಾ | ಮೈಸೂರು | 1001/- |
| ಅರತಿ | ಮೈಸೂರು | 1001/- |

– ಸಂಪಾದಕರು

**ಮೈಸೂರು ಮಹಾನಗರ ಪಾಲಿಕಾ ಕಚೇರಿ ದೂರವಾಣಿ ಸಂಖ್ಯೆಗಳು**

ಕಂಟ್ರೋಲ್ ರೂಂ 9449841196
ವಲಯ ಆಯುಕ್ತರು 1 – 9449841078
ವಲಯ ಆಯುಕ್ತರು 2 – 9449841079
ವಲಯ ಆಯುಕ್ತರು 3 – 9449841080
ವಲಯ ಆಯುಕ್ತರು 4 – 9449841104
ವಲಯ ಆಯುಕ್ತರು 5 – 9449841082
ವಲಯ ಆಯುಕ್ತರು 6 – 9449841230
ವಲಯ ಆಯುಕ್ತರು 7 – 9449841084
ವಲಯ ಆಯುಕ್ತರು 8 – 9449841197
ವಲಯ ಆಯುಕ್ತರು 9 – 9449841085

**ಮಾನ್ಯ ನಾಗರೀಕರೆ ನಿಮ್ಮ ಮನೆಯ ಕಸವನ್ನು ಮೂಲದಲ್ಲೆ ವಿಂಗಡಿಸಿ ಕಸದ ಗಾಡಿಗೆ ನೀಡಿರಿ**

**ಹುಟ್ಟು ಹಬ್ಬದ ಶುಭಾಷಯಗಳು**

| | | |
|---|---|---|
| ಅನುಪಮಾ | ಬೆಂಗಳೂರು | 21-04-2016 |
| ಶ್ಯಾಮಿಲಿ | ಬೆಂಗಳೂರು | 22-04-2016 |
| ರಕ್ಷಿತಾ | ಮೈಸೂರು | 23-04-2016 |
| ಇಂದಿರಾ | ಹಾಸನ | 24-04-2016 |
| ಕಲ್ಯಾಣಿ | ಹಾಸನ | 25-04-2016 |
| ಆರತಿ | ಮೈಸೂರು | 26-04-2016 |
| ಮಮತಾ | ಮಂಡ್ಯ | 27-04-2016 |
| ಶ್ರೀಗೌರಿ | ತುಮಕೂರು | 28-04-2016 |
| ಶೀತಲ್ | ತಿಪಟೂರು | 29-04-2016 |
| ದಿವ್ಯಶ್ರೀ | ಮೈಸೂರು | 30-04-2016 |

ಈ ಮಹಿಳಾ ಮಣಿಗಳ ಹುಟ್ಟುಹಬ್ಬಕ್ಕೆ ಮಹಿಳಾ ವಿಶೇಷ ಪತ್ರಿಕೆಯ ಬಳಗವು ಶುಭವನ್ನು ಕೋರಿದೆ

**ಓದುಗರೇ ಗಮನಿಸಿ**

ಇದು ನಿಮ್ಮ ಪತ್ರಿಕೆ ತನು ಮನ ಧನ ನೀಡಬಯಸುವ ಉದಾರ ಮನಸ್ಸಿನ ವ್ಯಕ್ತಿಗಳು / ಸಂಸ್ಥೆಗಳು ನಗದು/ ಬ್ಯಾಂಕ್ ಚೆಕ್ ರೂಪದಲ್ಲಿ ನಿಮ್ಮ ವಿವರಗಳೊಂದಿಗೆ ಇಚ್ಛೆಯುಳ್ಳವರು ನೀಡಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂಪಾದಕರನ್ನು ಸಂಪರ್ಕಿಸಿ. ಅಭಿವೃದ್ಧಿಗಾಗಿ ನೀಡುವ ದಾನಿಗಳ ಹೆಸರನ್ನು ಆಯಾಯ ಸಂಚಿಕೆಯಲ್ಲೂ ಅಲ್ಲದೆ ನಿಮ್ಮ ಹುಟ್ಟಿದ ದಿನಾಂಕದಂದು ಶುಭಾಷಯವನ್ನು ತಿಳಿಸಲಾಗುತ್ತದೆ.

ಮೊ : 8880334444

**ಮಹಿಳಾ ವಿಶೇಷ**
ಕನ್ನಡ ಮಹಿಳಾ ಸುದ್ದಿಯ
ಏಕೈಕ ವಾರ ಪತ್ರಿಕೆ (ಪ್ರತಿ ಮಂಗಳವಾರ)
ಮೈಸೂರು ಕಛೇರಿ :
c/o ಜನಶ್ರೀ ಸೋಲಾರ್
ಸಂಖ್ಯೆ : ಸಿ.ಹೆಚ್. 52, 7ನೇ ಮುಖ್ಯ ರಸ್ತೆ,
5ನೇ ಕ್ರಾಸ್, ಸರಸ್ವತಿಪುರಂ,
(ಸಿಂಡಿಕೇಟ್ ಬ್ಯಾಂಕ್ ಹಾಗೂ ವಿಜಯಾಬ್ಯಾಂಕ್ ಮಧ್ಯೆ)
ಮೈಸೂರು – 570 009
ಹೆಚ್.ವಿ. ವೆಂಕಟಸುಬ್ಬರಾವ್, ಸಂಪಾದಕರು 8880334444
(ಸಾರ್ವಜನಿಕ ಶಿಕ್ಷಣ ಇಲಾಖೆ ನಿವೃತ್ತ ನೌಕರ)
Email : mahilavishesha@yahoo.com
web : www.mahilavishesha.in



Edited, Published & Owned by H.V.Venkatasubbarao, #1021, 14th Cross, 2nd Stage, Hebbal, Mysore-570017 and Printed by B.C. Meera and Printed at Annapoorna Offset Printer, # 511, 14th Main, Saraswathipuram, Mysore-570009.Published at # 1021, 14th Cross, 2nd Stage, Hebbal, Mysore-570017 Mob.:8880334444, E-mail:mahilavishesha@yahoo.com web:www.mahilavishesha.in Editor: H.V. Venkatasubbarao, Decl.No.: MAG.90/2015 -16